ಪ್ರ .ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

ಸಿ.ಸಿ.ನಂ.**2155/2023.**

ದಿನಾಂಕಃ**14.10.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಕುಮಾರ್ ಆರ್ | ಚಾಸಾ-1, ಪ್ರಾಸಾ-1 |
| ತಂದೆಯ ಹೆಸರು | ರೇವಣ್ಣಪ್ಪ | |
| ವಯಸ್ಸು | 53 ವರ್ಷ | |
| ಉದ್ಯೋಗ | ಶಿಕ್ಷಕ ವೃತ್ತಿ, ಸೊಕ್ಕೆ ಪ್ರೌಢಶಾಲೆ | |
| ವಾಸ | ಕಡೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ 2 ಮತ್ತು ಆರೋಪಿತರು ಗೊತ್ತು. ಗೌರಮ್ಮ ನನ್ನ ತಾಯಿ. ಗೌರಮ್ಮ ರವರಿಗೆ ಕಡೂರು ನಗರದ ಬಿ ಜಿ ಎಸ್ ಶಾಲೆಯ ಮುಂದೆ ಸರ್ವೆ ನಂಬರ್ 115/2 ಬಿ ರಲ್ಲಿ 1 ಎಕರೆ 1 ಗುಂಟೆ ಅಡಿಕೆ ತೋಟ ಇದೆ. ದಿಃ25.03.2023 ರಂದು ಸಂಜೆ 6 ಗಂಟೆಗೆ ಸದರಿ ತೋಟಕ್ಕೆ ನಾನು ನೀರು ಕಟ್ಟಲೆಂದು ಹೋದಾಗ ನಮ್ಮ ಜಮೀನಿನ 1 ಅಡಿ ಜಮೀನನ್ನು ಒತ್ತುವರಿ ಮಾಡಿಕೊಂಡು 1 ನೇ ಆರೋಪಿ 2 ಮತ್ತು 3 ನೇ ಆರೋಪಿತರ ಬಳಿಯಿಂದ ಕಾಂಪೌಂಡ್ ನಿರ್ಮಿಸುತ್ತಿದ್ದರು. 1 ನೇ ಆರೋಪಿ ಈಗ ಮೃತಪಟ್ಟಿರುತ್ತಾರೆ. ನಾನು ಆರೋಪಿತರ ಬಳಿ ನಮ್ಮ ಜಾಗದಲ್ಲಿ ಏಕೆ ಕಾಂಪೌಂಡ್ ಕಟ್ಟುತ್ತಿದ್ದೀರಾ ಎಂದು ಕೇಳಿದ್ದಕ್ಕೆ 1 ನೇ ಆರೋಪಿಯು ನನ್ನನ್ನು ಕುರಿತು ಸೂಳೆಮಗನೆ, ಬೋಳಿಮಗನೆ ಇದು ಸಹಃ ನನ್ನ ಜಾಗ ನೀನು ಏಕೆ ಕೇಳುತ್ತೀಯ ಎಂದು ಬೆನ್ನಿಗೆ ಕೈನಿಂದ ಗುದ್ದಿ, ನನ್ನ ಕಪಾಳಕ್ಕೆ ಹೊಡೆದಿರುತ್ತಾರೆ. ನಂತರ 2 ನೇ ಆರೋಪಿಯು ಅಲ್ಲಿಯೇ ಇದ್ದ ಕಬ್ಬಿಣದ ರಾಡಿನಿಂದ ನನ್ನ ತಲೆಯ ಮದ್ಯಕ್ಕೆ ಹೊಡೆದು ರಕ್ತಗಾಯ ಮಾಡಿರುತ್ತಾರೆ. 3 ನೇ ಆರೋಪಿಯು ನನ್ನ ಎರಡು ಕೈಗಳನ್ನು ಹಿಡಿದುಕೊಂಡು ಅಲ್ಲಾಡದಂತೆ ನಿಲ್ಲಿಸಿಕೊಂಡಿರುತ್ತಾನೆ. ನಂತರ 1, 2 ಮತ್ತು 3 ನೇ ಆರೋಪಿತರು ನಿನ್ನನ್ನು ಕೊಲ್ಲದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ.

ನಂತರ ಅಲ್ಲಿಯೇ ಇದ್ದ ನನ್ನ ತಮ್ಮ ಪ್ರಭಾರಕರ್ (ಚಾಸಾ2) ನು ಬಂದು ಜಗಳದ

ಸದ್ದು ಕೇಳಿಸಿಕೊಂಡು ಸ್ಥಳಕ್ಕೆ ಬಂದು ಗಲಾಟೆ ಬಿಡಿಸಿರುತ್ತಾನೆ. ನನಗೆ ರಕ್ತಬರುತ್ತಿದ್ದ ಕಾರಣ ಕಡೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ.

ಅಲ್ಲಿ ವೈದ್ಯರು ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಶಿವಮೊಗ್ಗಕ್ಕೆ ಹೋಗುವಂತೆ ತಿಳಿಸಿರುತ್ತಾರೆ. ನಾವು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಮಾರನೇ ದಿನ ಮಧ್ಯಾಹ್ನ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ. ಗಲಾಟೆಯಾದ ದಿನ ಚಿಕಿತ್ಸೆ ಪಡೆಯುವ ಸಲುವಾಗಿ ಶಿವಮೊಗ್ಗಕ್ಕೆ ಹೋಗಿದ್ದರಿಂದ ಆ ದಿನವೇ ದೂರು ನೀಡಲು ಸಾದ್ಯವಾಗಿರಲಿಲ್ಲ.

ಸಾಕ್ಷಿಯು ದೂರನ್ನು ಮತ್ತು ದೂರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ, ದಿಃ27.03.2023 ರಂದು ಸಂಜೆ ಘಟನಾ ಸ್ಥಳವನ್ನು ತೋರಿಸುವಂತೆ ಪೊಲೀಸರು ಕೇಳಿದ್ದು, ನಾನು ತೋರಿಸಿದ ಸ್ಥಳದಲ್ಲಿ ಚಾಸಾ 3, 4 ರವರ ಸಮಕ್ಷಮ ಸಂಜೆ 5 ರಿಂದ 5.45 ಗಂಟೆ ಸಮಯದಲ್ಲಿ ಸ್ಥಳ ಮಹಜರ್ ಮಾಡಿ ಅಲ್ಲಿ ಬಿದ್ದಿದ್ದ ನಾನು ತೋರಿಸಿದ ಕಬ್ಬಿಣದ ರಾಡ್ ಅನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡು ಪೋಟೋ ತೆಗೆದಿರುರುತ್ತಾರೆ.

ಸಾಕ್ಷಿಯು ಸ್ಥಳ ಮಹಜರ್ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಈಗ ನೋಡುತ್ತಿರುವ ಪೋಟೋದಲ್ಲಿ ತನ್ನ, ಪೊಲೀಸರು ಮತ್ತು ಚಸಾ 3, 4 ರವರು ಮತ್ತು ಘನಟನಾ ಸ್ಥಳದ ಇರುವಿಕೆಯನ್ನು ನೋಡಿ ಗುರುತಿಸಿದರು, ಅದನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು.

ಆರೋಪಿತರನ್ನು ಮತ್ತು ಆ ದಿನ ಅಮಾನತ್ತು ಪಡಿಸಿಕೊಂಡ ರಾಡನ್ನು ನೋಡಿದಲ್ಲಿ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ರಾಡ್ ಅನ್ನು ಸಾಕ್ಷಿಯು ನೋಡಿ ಗುರುತಿಸಿದರು, ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 2 ಮತ್ತು 3 ನೇ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿದರು.

<u>ಪಾಟೀಸವಾಲುಃ ಆರೋಪಿತರ ಶ್ರೀ. ಕೆ ಎಸ್ ಆರ್ ವಕೀಲರಿಂದಃ</u>

ನಾನು ಸೊಕ್ಕೆ ಗ್ರಾಮದ ಪ್ರೌಢಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ದಿಃ25.03.2023 ರ ದಿನ ಯಾವ ದಿನ ಬರುತ್ತದೆ ಎಂದು ನನಗೆ ನೆನಪಿಲ್ಲ. ಆ ದಿನ ನಾನು ಶಾಲೆಗೆ ಹೋಗಿ ಕರ್ತವ್ಯ ನಿವರ್ಹಿಸಿರುತ್ತೇನೆ. ಕಡೂರಿನಿಂದ ಅಜ್ಜಂಪುರದ ಸೊಕ್ಕೆ ಗ್ರಾಮಕ್ಕೆ ಸುಮಾರು 25 ಕಿ ಮೀ ಅಂತರವಿದೆ. ನಾನು ಪ್ರತಿನಿತ್ಯ ನನ್ನ ಬೈಕಿನಲ್ಲಿ ಕರ್ತವ್ಯಕ್ಕೆ ಹೋಗುತ್ತೇನೆ. ನನ್ನ ಶಾಲೆಯ ಅವಧಿ ಬೆಳಗ್ಗೆ 10 ರಿಂದ ಸಂಜೆ 4.30 ರ ವರೆಗೂ ಇರುತ್ತದೆ. ನನ್ನ ಶಾಲೆಯಲ್ಲಿ ಇ-ಹಾಜರಾತಿ ವ್ಯವಸ್ಥೆ ಇರುವುದಿಲ್ಲ. ನಾನು ಶಾಲೆಗೆ ಹೋದಾಗ ಮತ್ತು ವಾಪಾಸು ಮನೆಗೆ ಬರುವಾಗ ರಿಜಿಸ್ಟರಿಗೆ ಸಹಿ ಮಾಡಿಬರಬೇಕು ಎಂದರೆ ಸಾಕ್ಷಿಯು ಬೆಳಗ್ಗೆ 10 ಕ್ಕೆ ಮತ್ತು ಮಧ್ಯಾಹ್ನ 2 ಗಂಟೆಗೆ ಸಹಿ ಮಾಡುತ್ತೇವೆ. ಸಾಮಾನ್ಯವಾಗಿ ಯಾವುದೇ ಸರ್ಕಾರಿ ಕಛೇರಿಗಳಲ್ಲಿ ಕರ್ತವ್ಯದ ವೇಳೆ ಮುಗಿದ ನಂತರವೇ ಸಹಿ ಮಾಡಿ ಮನೆಗೆ ಹೋಗಬೇಕು ಎಂದರೆ ಸರಿಯಲ್ಲ. ನಾನು ಸದರಿ ಶಾಲೆಯ ಸಹಶಿಕ್ಷಕನಾಗಿರುತ್ತೇನೆ. ನಮ್ಮ ಶಾಲೆಯ ಮುಖ್ಯ ಶಿಕ್ಷಕರ ಹೆಸರು ಬಿ.ತಿಪ್ಪೇಶಪ್ಪ. ಆ ದಿನ ಮುಖ್ಯ ಶಿಕ್ಷಕರಾಗಿ ಶಾಲೆಯಲ್ಲಿ ಸದರಿಯವರೇ ಇದ್ದರು.

ಆ ದಿನ ನಾನು ಸಂಜೆ 4.30 ಕ್ಕೆ ಕರ್ತವ್ಯ ಮುಗಿಸಿಕೊಂಡು ಮನೆಗೆ ಹೊರಟಿರುತ್ತೇನೆ. ನಿಪಿ 1 ನ್ನು ನಾನೇ ಬರವಣಿಗೆ ಮಾಡಿರುತ್ತೇನೆ. ನಿಪಿ 1 ನ್ನು ಬರವಣಿಗೆ ಮಾಡುವಾಗ ನಾನು ಚೆನ್ನಾಗಿ ಇದ್ದೆ ಎಂದರೆ ಸಾಕ್ಷಿಯು ನಾನು ಆಸ್ಪತ್ರೆಗೆ ಹೋಗಿ ವಾಪಾಸು ಬಂದಿದ್ದು ಆಗ ಬರೆದಿರುತ್ತೇನೆ. ನಾನು ನಿಪಿ 1 ನ್ನು ಬರೆಯುವಾಗ ಚೆನ್ನಾಗಿ ಇದ್ದೆ ಎಂದರೆ ಸರಿ, ನನಗೆ ತಲೆಗೆ ಗಾಯವಾಗಿತ್ತು.

ನಾನು ಶಾಲೆಗೆ ಹೋಗಿ ಕರ್ತವ್ಯ ಮುಗಿಸಿಕೊಂಡು ವಾಪಾಸು ಬಂದು ನಂತರ ತೋಟದ ಬಳಿಗೆ ಹೋಗಿದ್ದೆ ಎಂದು ನಿಪಿ 1 ರಲ್ಲಿ ಹೇಳಿಲ್ಲ ಎಂದರೆ ಸರಿ. 1 ನೇ ಆರೋಪಿಗೂ ಮತ್ತು 2, 3 ನೇ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ ಸಂಬಂಧ ಇರಬಹುದು. 2, 3 ನೇ ಆರೋಪಿತರನ್ನು ನಾನು ಈ ಹಿಂದೆ ನೋಡಿರುತ್ತೇನೆ. 2, 3 ನೇ ಆರೋಪಿತರ ತಂದೆಯ ಹೆಸರು ರಾಮಪ್ಪ. ನಾನು ಮತ್ತು ಕುರುಬ ಜನಾಂಗದವರು ಎಂದರೆ ಸರಿ. 1 ನೇ ಆರೋಪಿ ಮತ್ತು ನನ್ನ ನಡುವೆ ಸಂಬಂಧ

ಮೊದಲು ಚೆನ್ನಾಗಿ ಇತ್ತು.

ಬಿ ಜಿ ಎಸ್ ಶಾಲೆಯ ಮುಂದೆ ಮರವಂಜಿಗೆ ಹೋಗುವ ಮುಖ್ಯ ರಸ್ತೆ ಇದೆ ಎಂದರೆ ಸರಿ. ಸರ್ವೆ ನಂ.115/2 ಬಿ ಅನ್ನು ನಾನು ಸಂಬಂಧಪಟ್ಟ ಇಲಾಖೆಯವರಿಂದ ಸರ್ವೆ ಮಾಡಿಸಿರುತ್ತೇನೆ, ಯಾವ ವರ್ಷ ಮಾಡಿಸಿರುತ್ತೇನೆ ಎಂದು ಗೊತ್ತಿಲ್ಲ. ನಮ್ಮ ಮತ್ತು 1 ನೇ ಆರೋಪಿಯ ನಡುವೆ ಕಾಂಪೌಂಡ್ ಹಾಕುವ ವಿಚಾರದಲ್ಲಿ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ನಾವು ಚೆನ್ನಾಗಿ ಇದ್ದೆವು. ನಾನು ಶಾಲೆಗೆ ಹೋದ ನಂತರ ಅವರು ಕಾಂಪೌಂಡ್ ನಿರ್ಮಿಸಲು ಮುಂದಾಗಿರುತ್ತಾರೆ.

ನಾನು ನನ್ನ ಜಾಗ ಒತ್ತುವರಿ ಮಾಡಿ ಕಾಂಪೌಂಡ್ ನಿರ್ಮಿಸಿದ್ದಾರೆ ಎಂದು ಸಿವಿಲ್ ದಾವೆ ಹೂಡಿರುವುದಿಲ್ಲ. ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿಗೆ ಕೇವಲ ಕಣ್ಣಿನ ಅಳತೆಯ ಮೇಲೆ ಒತ್ತುವರಿ ಪತ್ತೆ ಮಾಡಲು ಸಾದ್ಯವಿಲ್ಲ ಎಂದರೆ ಸಾಕ್ಷಿಯು ನಾವು ಅಲ್ಲಿ ಕಂಬ ನೆಟ್ಟಿದ್ದೇವೆ ಆ ಆಧಾರದ ಮೇಲೆ ಒತ್ತುವರಿ ಗೊತ್ತಾಗಿರುತ್ತದೆ

ನಾನು ಕಡೂರಿನ ನ್ಯಾಯಾಲಯಗಳಲ್ಲಿ ಚೆಕ್ ಕೇಸು, ಸಿವಿಲ್ ದಾವೆಗಳನ್ನು ನಡೆಸಿರುತ್ತೇನೆ ಎಂದರೆ ಸಾಕ್ಷಿಯು ಒಂದು ಚೆಕ್ ಕೇಸು ಹಾಕಿದ್ದೆ ಹಾಗೂ ಓ.ಎಸ್.119/17 ರ ದಾವೆಯನ್ನು ಹಾಕಿದ್ದೆ ಎಂದು ನುಡಿಯುತ್ತಾರೆ.

ಆರೋಪಿತರು ನನಗೆ ಅವಾಚ್ಯವಾಗಿ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗೆ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ದಿಃ25.03.2023 ರಂದು ಸಂಜೆ ನಾನು ಬೋರ್ ನೀರನ್ನು ಕಟ್ಟಲೆಂದು ಹೋಗಿದ್ದೆ. ಸದರಿ ಜಮೀನಿನಲ್ಲಿ ಚಾನಲ್ ನೀರು ಬರುವುದಿಲ್ಲ. ನಿಪಿ 1 ರಲ್ಲಿ ಬೋರ್ ನೀರು ಕಟ್ಟಲೆಂದು ಹೋಗಿದ್ದೆ ಎಂದು ಹೇಳಿಲ್ಲ ಎಂದರೆ ಸಾಕ್ಷಿಯು ನಾನು ನೀರುಆಯಿಸಲು ಹೋಗಿದ್ದೆ ಎಂದು ಹೇಳಿರುತ್ತೇನೆ.

ಗಲಾಟೆಯಾಗಿದೆ ಎಂದು ಹೇಳುವ ಸಮಯದಲ್ಲಿ ನನ್ನನ್ನು ಮತ್ತು ಆರೋಪಿತರನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ ಆದರೆ ನಂತರದಲ್ಲಿ ಚಾಸಾ 2 ರವರು ಮಾತ್ರು ಬಂದಿರುತ್ತಾರೆ. ಚಾಸಾ 2 ನನ್ನ ತಮ್ಮ. ಗಲಾಟೆಯು ಸುಮಾರು ಸಂಜೆ 6.30 ರಿಂದ 6.45 ರ ಅವಧಿಯಲ್ಲಿ ಮುಗಿದಿರುತ್ತದೆ. ಗಲಾಟೆಯು ಯಾವಾಗ ಮುಗಿಯಿತು ಎಂದು ನಿಪಿ1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ.

ನನ್ನ ಮತ್ತು 1 ನೇ ಆರೋಪಿಯ ನಡುವೆ ಕಾಂಪೌಂಡ್ ಕಟ್ಟುವ ವಿಚಾರಕ್ಕೆ

ಮೊದಲಿನಿಂದ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ನನಗೆ ಹಲ್ಲೆ ಮಾಡಿಲ್ಲ ಅವರು ನನ್ನ ಪರ ಸಾಕ್ಷ್ಯ ನುಡಿಯುವುದಿಲ್ಲ ಎಂದು ಹೇಳಿದ್ದಕ್ಕೆ ಅವರನ್ನು ಸಹ ಈ ಕೇಸಿನಲ್ಲಿ ಆರೋಪಿತರನ್ನಾಗಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮು ಮಾ 1 ರ ತರಹದ ರಾಡ್ ಎಲ್ಲಾ ಕಡೆಯು ಸಿಗುತ್ತದೆ ಎಂದರೆ ಸರಿಯಲ್ಲ. ಮು ಮಾ 1 ರಿಂದಲೇ ಹಲ್ಲೆ ಮಾಡಿರುತ್ತಾರೆ ಎಂದು ಹೇಳಲು ಅದರ ಮೇಲೆ ಯಾವುದೇ ವಿಶೇಷ ಗುರುತು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ರಾಡಿನ ವಿನ್ಯಾಸವನ್ನು ನಾನು ನಿಪಿ 1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ.

ಆ ದಿನ ನಾನು ನೀಲಿ ಬಣ್ಣದ ಅಂಗಿ ಧರಿಸಿದ್ದೆ. ನೀಲಿ ಬಣ್ಣದ ಅಂಗಿ ಧರಿಸಿದ್ದೆ ಎಂದು ನಿಪಿ 1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ನೀಲಿ ಬಣ್ಣದ ಅಂಗಿ ಎಂದು ನಮೂದಿಸಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ಅದನ್ನೆಲಾ ನೆನಪಿನಲ್ಲಿ ಇಟ್ಟುಕೊಂಡು ಬರೆಯಲು ಸಾದ್ಯವಾಗಿಲ್ಲ ಎಂದು ನುಡಿಯುತ್ತಾರೆ.

ಪೊಲೀಸರು ಸ್ಥಳಕ್ಕೆ ಬಂದು ಯಾವುದೇ ಮಹಜರ್ ಮಾಡಿಲ್ಲ ಮತ್ತು ನಾನು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 2 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 3, 4 ನನ್ನ ಸ್ನೇಹಿತರು ಎಂದರೆ ಸರಿಯಲ್ಲ. 1 ನೇ ಆರೋಪಿಯು ಒತ್ತುವರಿ ಮಾಡಿದ್ದಲ್ಲಿ ಅದನ್ನು ಸಿವಿಲ್ ದಾವೆ ಹೂಡಿ ಪರಿಹಾರ ಕಂಡುಕೊಳ್ಳಬೇಕಿತ್ತು ಆದರೆ ನಾನು 1 ನೇ ಆರೋಪಿ ಮತ್ತು ಅವರ ಕೆಲಸಗಾರರಾದ 2, 3 ನೇ ಆರೋಪಿತರಿಗೆ ವಿನಾ ಕಾರಣ ತೊಂದರೆ ಕೊಡಲು ಕ್ರಿಮಿನಲ್ ಕೇಸು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಯಾವುದೇ ಒತ್ತುವರಿಯಾಗದ ಕಾರಣ ನಾನು 1 ನೇ ಆರೋಪಿಯ ವಿರುದ್ಧ ಯಾವುದೇ ಸಿವಿಲ್ ದಾವೆ ಹೂಡಿರುವುದಿಲ್ಲ, ನಾನು ಶಿಕ್ಷಕನಾಗಿರುವುದರಿಂದ ನನ್ನ ಪ್ರಭಾವ ಬೀರಿ ಆರೋಪಿತರ ವಿರುದ್ಧ ಕ್ರಿಮಿನಲ್ ಕೇಸು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿತರುಗಳು ರಾಡಿನಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನೇ ಕೆಲಸಮಾಡುವಾಗ ಬಿದ್ದು ಗಾಯ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ರಕ್ತಗಾಯವಾಗಿದ್ದ ಪಕ್ಷದಲ್ಲಿ ಅಂಗಿ ರಕ್ತವಾಗುತ್ತಿತ್ತು, ಸದರಿ ಅಂಗಿಯನ್ನು ಪೊಲೀಸರಿಗೆ

ನೀಡಬಹುದಿತ್ತು ಎಂದರೆ ಪೊಲೀಸರು ಅಂಗಿ ಕೇಳಿಲ್ಲ ಎಂದು ನುಡಿಯುತ್ತಾರೆ. ನನಗೆ ರಕ್ತಗಾಯವಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಕಡೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿರುವುದಿಲ್ಲ ಮತ್ತು ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ಘಟನಾ ಸ್ಥಳದ ಪಶ್ಚಿಮಕ್ಕೆ ನನ್ನ ತಾಯಿಯ ಹೆಸರಿನಲ್ಲಿರುವ ಜಮೀನು ಇದೆ. ಘಟನಾ ಸ್ಥಳ ಜನ ದಟ್ಟಣೆ ಇರುವ ಸ್ಥಳ ಎಂದರೆ ಸರಿಯಲ್ಲ ಅದು ತೋಟ. ನಾನು ಆರೋಪಿತರ ವಿರುದ್ಧ ದ್ವೇಷದಿಂದ ಸುಳ್ಳು ಕೇಸು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1 ಕ್ಕು ಈ ಕೇಸಿಗೂ ಆರೋಪಿತರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.